**ಕರ್ನಾಟಕ ಸರ್ಕಾರನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12.**

ಸಂಖ್ಯೆ: *PUE/Exam/I PU/Online Application/2015-16* ದಿನಾಂಕ: -08-2015.

***ಸುತ್ತೋಲೆ***

*ವಿಷಯ:* 2014-15ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶವನ್ನು ಹಾಗೂ 2015-16ನೇ ಸಾಲಿನ ಪ್ರಥಮ ಪಿಯುಸಿ ದಾಖಲಾತಿ ಮಾಹಿತಿ ONLINE ಮೂಲಕ ದಾಖಲಿಸುವ ಬಗ್ಗೆ.

* * * * *

2014-15ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿ ವ್ಯಾಸಂಗಕ್ಕೆ ದಾಖಲಾಗಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಕಾಲೇಜುಗಳಿಂದ ONLINE ತರಿಸಿಕೊಳ್ಳಲಾಗಿದೆ. ಕಾಲೇಜುಗಳ ಪ್ರಾಂಶುಪಾಲರು ONLINE ಸಲ್ಲಿಸಿದ ಮಾಹಿತಿಯನ್ನು ಆಧಾರಿಸಿ ವಿದ್ಯಾರ್ಥಿಗಳಿಗೆ 'ಇಲಾಖಾ ವಿದ್ಯಾರ್ಥಿ ಸಂಖ್ಯೆ' ನೀಡಿ ಅನುಮೋದನಾ ಪಟ್ಟಿಯನ್ನು ONLINE ನಲ್ಲಿ ಬಿಡಲಾಗಿದೆ. ಕಾಲೇಜಿನ ಪ್ರಾಂಶುಪಾಲರು ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಫಲಿತಾಂಶದ ಮಾಹಿತಿಯನ್ನು ONLINE ಮೂಲಕ ಮಾತ್ರ ದಾಖಲಿಸಲು ಅವಕಾಶವಿದ್ದು ತಮ್ಮ ಕಾಲೇಜಿನಿಂದ ನೋಂದಾಯಿಸಲಾದ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ಮುಂದೆ ತಿಳಿಸಲಾದ ಅಂಶಗಳನ್ನು ಪಾಲಿಸುತ್ತಾ ಮಾಹಿತಿ ದಾಖಲಿಸುವುದು.

**ಫಲಿತಾಂಶ ಮಾಹಿತಿಯನ್ನು ONLINE ದಾಖಲಿಸುವ ಬಗ್ಗೆ:**

ಈಗ ಬಿಡುಗಡೆ ಮಾಡಲಾಗಿರುವ ಅನುಮೋದನಾ ಪಟ್ಟಿಯಲ್ಲಿ ಪ್ರಥಮ ಪಿಯುಸಿ ಪೂರಕ ಪರೀಕ್ಷೆಯ ಫಲಿತಾಂಶವನ್ನು ಸೇರಿದಂತೆ, ಫಲಿತಾಂಶವನ್ನು ದಾಖಲಿಸ ಬೇಕು. **ONLINE** ಮೂಲಕ ಫಲಿತಾಂಶವನ್ನು **UP DATE** ಮಾಡುವ ಸಂಬಂಧ ಈ ಹಂತಗಳನ್ನು ಅನುಸರಿಸಬೇಕು.

1. **PU Online Portal** ನಲ್ಲಿ **User Name** ಮತ್ತು **Password** ಬಳಸಿ **Log in** ಆಗಬೇಕು.
2. **Update Result Menu** ನಲ್ಲಿ **Enroll Result** ನ್ನು **Select** ಮಾಡುವುದು.
3. ಆಗ ನೀವು ದಾಖಲಿಸಿರುವ ವಿದ್ಯಾರ್ಥಿಗಳ ಮಾಹಿತಿ 'ಇಲಾಖಾ ವಿದ್ಯಾರ್ಥಿ ಸಂಖ್ಯೆ' ಯೊಂದಿಗೆ ತೆರೆದು ಕೊಳ್ಳುತ್ತದೆ. ಅದರಲ್ಲಿ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿದಂತೆ **Change Result Column** ನಲ್ಲಿ **Update Button** ಕ್ಲಿಕ್ ಮಾಡುವುದು.
4. ಆಗ ಆ ವಿದ್ಯಾರ್ಥಿಯ ದಾಖಲಾತಿ ವಿವರ ಬರುತ್ತದೆ, ಅಲ್ಲಿ ಕಂಡುಬರುವ **'Result Column'** ನಲ್ಲಿ ವಿದ್ಯಾರ್ಥಿಯ ಫಲಿತಾಂಶವನ್ನು **PASS** ಆಗಿದ್ದರೆ **PASS** ಎಂದು ಹಾಗೂ **FAIL** ಆಗಿದ್ದರೆ **FAIL** ಎಂದು ನಮೂದಿಸುವುದು.
5. **Remarks Column** ನಲ್ಲಿ ವಿದ್ಯಾರ್ಥಿಯ ಹಾಜರಾತಿ ಕೊರತೆ ಇದ್ದಲ್ಲಿ **SAT** ಎಂಬುದಾಗಿಯೂ, ವಿದ್ಯಾಭ್ಯಾಸ ಸ್ಥಗಿತಗೊಳಿಸಿದ್ದರೆ **DIS** ಎಂಬುದಾಗಿ ನಮೂದಿಸುವುದು ನಂತರ **Update Button** ಕ್ಲಿಕ್ ಮಾಡುವುದು.
6. ಪ್ರತಿ ವಿದ್ಯಾರ್ಥಿಯ ಮಾಹಿತಿ ಸಲ್ಲಿಸಲು ಮೇಲಿನ ಅಂಕಣ 3 ರಿಂದ 5ರವರೆಗಿನ ಚಟುವಟಿಕೆಯನ್ನು ಮಾಡತಕ್ಕದ್ದು.

ಈ ಎಲ್ಲಾ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರಿಂದ ಅನುಮೋದಿಸಿಕೊಂಡ ಫಲಿತಾಂಶ ಪಟ್ಟಿಯನ್ನು ಆಧರಿಸಿಯೇ **ONLINE** ಮೂಲಕ ಫಲಿತಾಂಶವನ್ನು **UPDATE** ಮಾಡುವುದು. ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು **UPDATE** ಮಾಡಿದ ನಂತರ ತಮ್ಮ ಕಾಲೇಜಿನ **UPDATED** ಪಟ್ಟಿಯನ್ನು ಡೌನ್-ಲೋಡ್ ಮಾಡಿಕೊಂಡು ಒಂದು ಪ್ರತಿಯನ್ನು ಕಾಲೇಜಿನಲ್ಲಿ ಕಾದಿರಿಸುವುದು.

2014-15ರ ಪ್ರಥಮ ಪಿಯುಸಿ ಫಲಿತಾಂಶವನ್ನು ಮೇಲೆ ತಿಳಿಸಿರುವ ಕ್ರಮದಂತೆ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಕಡ್ಡಾಯವಾಗಿ **UPDATE** ಮಾಡುವುದು, ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಇಲಾಖಾ ವೆಬ್ ಸೈಟ್‌ನಲ್ಲಿನ **'PU Online Portal'** ನಲ್ಲಿ **UPDATE** ಮಾಡಲು ದಿನಾಂಕ 12-08-2015 ರಿಂದ 15-09-2015ರವರೆಗೆ ಅವಕಾಶ ಮಾಡಿಕೊಡಲಾಗಿದೆ. ಫಲಿತಾಂಶ/ಮಾಹಿತಿ **UPDATE** ಮಾಡಲು ಕೊನೆಯ ದಿನಾಂಕವಾದ 15-09-2015ರ ನಂತರವೂ ಫಲಿತಾಂಶ/ಮಾಹಿತಿ **UPDATE** ಮಾಡಿರದ ವಿದ್ಯಾರ್ಥಿಗಳ ನೋಂದಣಿ ರದ್ದುಗೊಳಿಸಲಾಗುತ್ತದೆ ಹಾಗೂ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತದೆ.

1. **ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಕಳೆದ ವರ್ಷಗಳಲ್ಲಿ ಅನುತ್ತೀರ್ಣರಾಗಿ ಈ ವರ್ಷದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಫಲಿತಾಂಶ ಕಳುಹಿಸುವ ಬಗ್ಗೆ.**

ಕಳೆದ ವರ್ಷಗಳಲ್ಲಿ ಪ್ರಥಮ ಪಿಯುಸಿಯಲ್ಲಿ ಅನುತ್ತೀರ್ಣರಾಗಿ ಈ ವರ್ಷದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಫಲಿತಾಂಶವನ್ನು ವಿದ್ಯಾರ್ಥಿ ಸಂಖ್ಯೆಯನ್ನೊಳಗೊಂಡ ವಿವರಗಳನ್ನು ಪ್ರತ್ಯೇಕ ಪಟ್ಟಿ ಮಾಡಿ ಸಲ್ಲಿಸುವುದು. ಪೂರಕವಾಗಿ ಜಿಲ್ಲಾ ಉಪನಿರ್ದೇಶಕರಿಂದ ಅನುಮೋದಿಸಿಕೊಂಡ ಪಟ್ಟಿಯ ಪ್ರತಿಯೊಂದನ್ನು 'ಜಂಟಿ ನಿರ್ದೇಶಕರು (ಶೈಕ್ಷಣಿಕ)', ಪಪೂಶಿಇ, ಬೆಂಗಳೂರು. ಇವರಿಗೆ ಕಳುಹಿಸುವುದು.

2. **ನಿಯಮ ಬಾಹಿರವಾಗಿ ದಾಖಲಾತಿ ಮಾಡಿಕೊಂಡಿರುವ ಬಗ್ಗೆ.**

ಕೆಲವು ಕಾಲೇಜುಗಳ ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗ ಮೂಲ ದಾಖಲೆಗಳನ್ನು ಪರಿಶೀಲಿಸದೆ ದಾಖಲಾತಿ ಮಾಡಿಕೊಂಡಿರುತ್ತಾರೆ. ಹೀಗೆ ದಾಖಲಾತಿ ಮಾಡಿಕೊಳ್ಳುವುದರಿಂದ ಒಬ್ಬ ವಿದ್ಯಾರ್ಥಿ / ವಿದ್ಯಾರ್ಥಿನಿ ಬೇರೆ ಬೇರೆ ಕಾಲೇಜುಗಳಲ್ಲಿ ನಿಯಮಬಾಹಿರವಾಗಿ ದಾಖಲಾತಿ ಮಾಡಿಕೊಂಡಿರುವುದು ಪ್ರವೇಶ ಪತ್ರಗಳನ್ನು ಮುದ್ರಿಸಿ ನೀಡುವಾಗ ಪತ್ತೆ ಮಾಡಲಾಗಿರುತ್ತದೆ. ಇದು ಅತ್ಯಂತ ಗಂಭೀರ ಸ್ವರೂಪದ ನಡವಳಿಕೆಯಾಗಿರುತ್ತದೆ. ಇನ್ನು ಮುಂದೆ ಅಕ್ರಮ ದಾಖಲಾತಿಗಳು ಪತ್ತೆಯಾದಲ್ಲಿ ಪ್ರಾಂಶುಪಾಲರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು. ಆದರೆ ಕೆಲವು ಕಾಲೇಜುಗಳು ನಿರ್ದೇಶನಾಲಯದಿಂದ ಅನುಮತಿ ಪಡೆಯದ ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದನ್ನು ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಸದರಿ ಕಾಲೇಜುಗಳು ಈ ಕೂಡಲೇ ಸ್ಪಷ್ಟನೆ ನೀಡುವುದರ ಜೊತೆಗೆ ತಮ್ಮ ಕಾಲೇಜಿಗೆ ನೀಡಿರುವ 'ಸಂಯೋಜನೆ ಅನುಮತಿ' ಪತ್ರ, ಅನುಮೋದಿಸಿದ ಸಂಯೋಜನೆಯಲ್ಲಿನ ದಾಖಲಾತಿ ವಿವರ ಹಾಗೂ ಅನುಮೋದನೆ ಪಡೆಯದ ಸಂಯೋಜನೆ / ಭಾಷಾ ವಿಷಯಗಳಲ್ಲಿನ ದಾಖಲಾತಿ ವಿವರಗಳೊಂದಿಗೆ ಖುದ್ದಾಗಿ 'ಜಂಟಿ ನಿರ್ದೇಶಕರು (ಮಾನ್ಯತೆ)' ಇವರನ್ನು ಕಾಣುವುದು. ಅನುಮೋದನೆ ಪಡೆಯದ ಸಂಯೋಜನೆ / ಭಾಷಾ ವಿಷಯಗಳಲ್ಲಿ ದಾಖಲಾತಿ ಮಾಡಿಕೊಂಡಿರುವ ವಿದ್ಯಾರ್ಥಿಗಳ ನೋಂದಣಿ ರದ್ದುಗೊಂಡಲ್ಲಿ ಪ್ರಾಂಶುಪಾಲರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

3. **ದ್ವಿತೀಯ ಪಿಯುಸಿ ತರಗತಿಗಳಿಗೆ 'ಕಾಲೇಜು ಬದಲಾವಣೆ' ಮಾಡಿಕೊಂಡಿರುವ ವಿದ್ಯಾರ್ಥಿಗಳ ಮಾಹಿತಿ ಸಲ್ಲಿಸುವ ಬಗ್ಗೆ:**

2015-16ನೇ ಸಾಲಿನ ದ್ವಿತೀಯ ಪಿಯುಸಿ ತರಗತಿಗಳಿಗೆ ಕಾಲೇಜು ಬದಲಾವಣೆ ಮಾಡಿಕೊಂಡಿರುವ ವಿದ್ಯಾರ್ಥಿಗಳ ಮಾಹಿತಿಯನ್ನು **PROFORMA-2**ರಲ್ಲಿ ಭರ್ತಿ ಮಾಡಿ ಅರ್ಜಿಗಳನ್ನು ಅಗತ್ಯ ಪೂರಕ ದಾಖಲೆಗಳೊಂದಿಗೆ ಒಂದು ಲಕೋಟೆಯಲ್ಲಿರಿಸಿ ಲಕೋಟೆಯ ಮೇಲ್ಭಾಗದಲ್ಲಿ ಸ್ಪಷ್ಟವಾಗಿ 'ಕಾಲೇಜು ಬದಲಾವಣೆ ಅರ್ಜಿ 2015-16', ಕಾಲೇಜು ವಿಳಾಸ & ಕಾಲೇಜು ಸಂಕೇತ ಸಂಖ್ಯೆಯನ್ನು ನಮೂದಿಸಿ ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ದಿನಾಂಕ 15-09-2015ರೊಳಗೆ ತಲುಪಿಸತಕ್ಕದ್ದು.

1. **ಭಾಷಾ ವಿನಾಯಿತಿ ಕುರಿತು:**

ಪ್ರಥಮ ಪಿಯುಸಿ ತರಗತಿಗಳಲ್ಲಿ ಕಲಿಕೆ ನ್ಯೂನತೆ ಇರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಒಂದು

ಭಾಷಾ ವಿಷಯದ ಕಲಿಕೆಯ ವಿನಾಯಿತಿಯನ್ನು ಇಲಾಖೆಯಿಂದ ಅನುಮತಿ ಪತ್ರ ಪಡೆದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಪ್ರತ್ಯೇಕ ಪಟ್ಟಿಯಲ್ಲಿ ವಿನಾಯಿತಿ ನೀಡಿರುವ ಭಾಷೆಯನ್ನು ಸ್ಪಷ್ಟವಾಗಿ ನಮೂದಿಸಿ, ಇಲಾಖಾ ಅನುಮತಿ ಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸಿ ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ದಿನಾಂಕ 15-09-2015ರೊಳಗೆ ತಲುಪಿಸತಕ್ಕದ್ದು.

ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಎಲ್ಲಾ ಕಾಲೇಜುಗಳಿಂದ ಮೇಲಿನ (4) ಮತ್ತು (5)ರ ಅಂಕಣದಂತೆ ದಾಖಲೆಗಳನ್ನು ಸಲ್ಲಿಸಿರುವುದನ್ನು ಖಚಿತ ಪಡಿಸಿಕೊಂಡು ದಿನಾಂಕ 25-09-2015ರಂದು ಸದರಿ ದಾಖಲೆಗಳನ್ನು ಖುದ್ದಾಗಿ ಕೇಂದ್ರ ಕಛೇರಿಗೆ ತಲುಪಿಸತಕ್ಕದ್ದು.

**2015-16ನೇ ಸಾಲಿನ ಪ್ರಥಮ ಪಿಯುಸಿ ದಾಖಲಾತಿ ಮಾಹಿತಿ ONLINE ಮೂಲಕ ದಾಖಲಿಸುವ ಬಗ್ಗೆ.**

2015-16ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ONLINE ಮೂಲಕ ದಾಖಲಿಸುವ ಸಂಬಂಧ **'2015-16ನೇ ಸಾಲಿನ ಪ್ರಥಮ ಪಿಯುಸಿ ದಾಖಲಾತಿ-On-line Updation Portal'**ನ್ನು ಇಲಾಖಾ ವೆಬ್ ಸೈಟ್ *'www.pue.kar.nic.in'* ನಲ್ಲಿ ದಿನಾಂಕ 12-08-2015 ರಿಂದ ಬಿಡಲಾಗುವುದು, ಎಲ್ಲಾ ಕಾಲೇಜುಗಳು ಸದರಿ ವ್ಯವಸ್ಥೆಯಲ್ಲಿ ನೋಂದಾಯಿಕೊಂಡು ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಮಾಹಿತಿಯನ್ನು ಕಡ್ಡಾಯವಾಗಿ ದಾಖಲಿಸುವುದು, ಸದರಿ ವ್ಯವಸ್ತೆ ದಿನಾಂಕ 30-09-2015 ರಂದು ಕಡ್ಡಾಯವಾಗಿ ಮುಕ್ತಾಯಗೊಳಿಸಲಾಗುವದು. ಕೊನೆಯ ದಿನಾಂಕವಾದ 30-09-2015ನ್ನು ಯಾವುದೇ ಕಾರಣಕ್ಕೂ ಮುಂದೂಡಲಾಗುವುದಿಲ್ಲ ಹಾಗೂ ನಿಗಧಿತ ದಿನಾಂಕದೊಳಗೆ ಮಾಹಿತಿ ನೋಂದಣಿ ಮಾಡದ ಕಾಲೇಜಿನ ಪ್ರಾಂಶುಪಾಲರೇ ಮುಂದಿನ ಎಲ್ಲಾ ಆಗು ಹೋಗುಗಳಿಗೆ ನೇರ ಜವಾಬ್ದಾರರಾಗಿರುತ್ತಾರೆ.

Sd/-

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು :

1. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪಪೂಶಿಇ. (ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು).